<u>ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-</u>

ನಾನು ಈ ನ್ಯಾಯಾಲಯಕ್ಕೆ ಸಲ್ಲಿಸಿದ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ತಯಾರಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಾಲ್ಲೂಕು ಕಛೇರಿಯ ಹತ್ತಿರ ತಯಾರಿಸಿರುತ್ತೇನೆ. ನಾನು 2021 ರಲ್ಲಿ ಸಿ.ಡಿ.ಎ ನಲ್ಲಿ ಇಂಜೀನಿಯರ್ ಆಗಿ ಕೆಲಸ ಮಾಡುತ್ತಿದ್ದೆನು. ಆ ಸಮಯದಲ್ಲಿ ನಾನು Court Commissioner ಆಗಿ ನೇಮಕವಾಗಿದ್ದೆನು. ನಾನು Court Commissioner ಆಗಿ ನೇಮಕವಾಗಿದ್ದ ಕೇಸಿನ ನಂಬರ್ ನನಗೆ ಈಗ ನೆನಪಿಲ್ಲ. ಆದರೆ, ಇದೇ ನ್ಯಾಯಾಲಯದ ಕೇಸು ಆಗಿತ್ತು. ನಾನು ನನ್ನ ಪ್ರಮಾಣ ಪತ್ರವನ್ನು ತಯಾರಿಸುವ ಸಮಯದಲ್ಲಿ ಸದರಿ ಕಮೀಷನರ್ ವರದಿಯ ನಕಲು ಪ್ರತಿಯನ್ನು ಇಟ್ಟುಕೊಂಡಿದ್ದೆನು. ಪ್ರಮಾಣ ಪತ್ರದಲ್ಲಿ ನನ್ನ ಸಹಿಯನ್ನು ನಾನೇ ಗುರುತು ಮಾಡಿಕೊಂಡಿದ್ದು ಬೇರೆ ಯಾರೂ ಗುರುತಿಸಿರುವುದಿಲ್ಲ. ನನ್ನ ಸಹಿಯನ್ನು ನಾನೇ ಗುರುತು ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಅವರ ಪ್ರಮಾಣ ಪತ್ರದಲ್ಲಿ ಇರುವ ಸಹಿಯನ್ನು ಸಾಕ್ಷಿದಾರರಿಗೆ ತೋರಿಸಿ ಅದು ಯಾರ ಸಹಿ ಎಂದು ಕೇಳಲಾಗಿ ಸಾಕ್ಷಿದಾರರು ಅದು ವಕೀಲರಾದ ಶ್ರೀ ಜಯವಂತ್ ರವರ ಸಹಿಯಾಗಿದ್ದು ತಾನು ಸದರಿ ಪ್ರಮಾಣ ಪತ್ರಕ್ಕೆ ಸಹಿಯನ್ನು ಹಾಕಿದಾಗ ಸದರಿ ವಕೀಲರೂ ಕೂಡಾ ಇದ್ದರು ಎಂದು ಸಾಕ್ಷಿದಾರರು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರವನ್ನು ಸದರಿ ವಕೀಲರು

ತಯಾರಿಸಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿ ವಕೀಲರ ಸಹಾಯದೊಂದಿಗೆ ನನ್ನ ಪ್ರಮಾಣ ಪತ್ರವನ್ನು ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಈ ನ್ಯಾಯಾಲಯದಿಂದ Court Commissioner ಆಗಿ ನೇಮಕವಾಗಿದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಬಂದಿದ್ದ Memo of Instructions ನ ಮೂಲ ಪ್ರತಿಯನ್ನು ಇಟ್ಟುಕೊಂಡಿರುತ್ತೇನೆ. ಹಿಂದಿನ Court Commissioner ವರದಿಯಲ್ಲಿ ಸೈಟ್ ನಂ.194 ರ ಬೌಂಡರಿಸ್ ಅನ್ನು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಸೈಟ್ ಪ್ರಕಾರ ಬೌಂಡರೀಸ್ ಮಾರ್ಕ್ ಮಾಡಿಕೊಟ್ಟಿದ್ದು ಲೇಔಟ್ ಪ್ರಕಾರ ಮಾರ್ಕ್ ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. Memo of Instructions ನಲ್ಲಿ ನ್ಯಾಯಾಲಯದಿಂದ ದಾಖಲೆಗಳನ್ನು ಪಡೆದುಕೊಂಡು Commissioner Warrant ಅನ್ನು execute ಮಾಡಬೇಕು ಎಂದು ಇತ್ತು ಎಂದರೆ ಸರಿ. ಆ ಪ್ರಕಾರ ನಾನು ದಾಖಲೆಗಳನ್ನು ನ್ಯಾಯಾಲಯದಿಂದ ತೆಗೆದುಕೊಂಡು ಹೋಗಿರುವುದಿಲ್ಲ. ನಾನು ಲೇಔಟ್ ಪ್ಲಾನ್ ಮತ್ತು ಇ-ಸ್ವತ್ತು ಹಾಗೂ ಕ್ರಯಪತ್ರದ ಆಧಾರದ ಮೇಲೆ ಕಮೀಷನರ್ ವಾರೆಂಟ್ ಅನ್ನು ಕಾರ್ಯಗತಗೊಳಿಸಿರುತ್ತೇನೆ. ಸದರಿ ದಾಖಲೆಗಳನ್ನು ನನಗೆ ಹೇಮಂತ ಪ್ರಭು ಹಾಗೂ ಚಂದ್ರಶೇಖರ್ ರವರು ನಮ್ಮ ಕಛೇರಿಗೆ ತಂದು ನೀಡಿದ್ದರು. Commissioner Warrant ಜೊತೆಗೆ ಯಾವುದೇ ದಾಖಲೆ ಇರಲಿಲ್ಲ. ನಿಪಿ-29 ಲೇಔಟ್ ಪ್ಲಾನ್ ನನಗೆ ಕಛೇರಿಯಲ್ಲಿ ಸಿಕ್ಕಿರುತ್ತದೆ. ನಿಪಿ-29 ರಲ್ಲಿ ನಮ್ಮ ಕಛೇರಿಯ ಸೀಲು ಹಾಗೂ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ-30 ನ್ನು

ನಾನೇ ಗೂಗಲ್ ನಿಂದ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯ ಬಗ್ಗೆ ನಾನು Certificate ಅನ್ನು ನೀಡಿರುವುದಿಲ್ಲ. ನಿಪಿ-28 ನ್ನು ನಾನು ಸೈಟ್ ಕಂಡೀಷನ್ ಹಾಗೂ ಲೇಔಟ್ ಪ್ಲಾನ್ ನ ಆಧಾರದ ಮೇಲೆ ಮಾಡಿರುತ್ತೇನೆ. ಸದರಿ ನಿಪಿ-28 ರಲ್ಲಿ ದಿಕ್ಕುಗಳನ್ನು ತೋರಿಸುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸೈಟ್ ನಂ.194 ರಿಂದ 205 ಪೂರ್ವಕ್ಕೆ ಮುಖ ಮಾಡಿರುತ್ತದೆ. ಸೈಟ್ ನಂ.217 ರಿಂದ 206 ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಇರುತ್ತದೆ. ಸೈಟ್ ನಂ.218 ರಿಂದ 220 ದಕ್ಷಿಣಕ್ಕೆ ಮುಖ ಮಾಡಿರುತ್ತದೆ. ನಿಪಿ-28 ರಲ್ಲಿ ತೋರಿಸಲಾದ ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಿರುತ್ತೇನೆ. ಈ ಬಗ್ಗೆ ನನ್ನ ವರದಿಯಲ್ಲಿ ನಮೂದು ಮಾಡಿರುತ್ತೇನೆ. ನಿಪಿ-25 ರ ಸೀರಿಯಲ್ ನಂಬರ್ 2 ಮತ್ತು 3 ಕ್ಕೆ ನಾನು 'ಅನುಮೋದನೆಯಾಗಿರುವ ಬಡಾವಣೆ ನಕ್ಷೆಯ ಅಳತೆಗೂ ಮತ್ತು ಭೌತಿಕವಾಗಿರುವ ಅಳತೆಗೂ ವ್ಯತ್ಯಾಸವಿರುದರಿಂದ, ನಿವೇಶನಗಳನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಅನುಮೋದಿತ ವಿನ್ಯಾಸದ ನಿವೇಶನಗಳನ್ನು ವಿಭಾಗ ಮಾಡಿಕೊಂಡಿರುವುದು ಕಂಡುಬಂದಿರುವುದರಿಂದ ನಗರಸಭೆ ಕಛೇರಿಯಲ್ಲಿ ದಾಖಲಾಗಿರುವ ಖಾತೆಯ ಅಳತೆಯಂತೆ ನಿವೇಶನಗಳನ್ನು ಗುರುತಿಸಿಕೊಳ್ಳಬಹುದಾಗಿರುತ್ತದೆ' ಎಂದು ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ನಿಪಿ-22 ರಿಂದ ನಿಪಿ-30 ನ್ನು ನಾನು ಸಿ.ಡಿ.ಎ ಕಛೇರಿಯಿಂದ ಪಡೆದುಕೊಂಡಿರುತ್ತೇನೆ. ನಾನು ಸದರಿ ದಾಖಲೆಗಳ ಬಗ್ಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವರದಿ

ಸದರಿ ಕೇಸಿನಲ್ಲಿ ಸ್ವೀಕೃತ ಆಗಿದೆಯೋ ಅಥವಾ ತಿರಸ್ಕೃತವಾಗಿದೆಯೋ ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್‌ಃ

ಓ.ಎಸ್.ನಂಃ 79/2023
ಪಿ.ಡಬ್ಲ್ಯೂಃ 2